**ದಿನಾಂಕಃ 17.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 3ನೇ ಪ್ರತಿವಾದಿ ಪರ ವಕೀಲರಿಂದಃ**

1. ನಾನು ಭಾಗ ಕೋರಿ ದಾವೆ ಹಾಕಿರುತ್ತೇನೆ. ನಾನು ದಾವೆಯನ್ನು ಸರ್ವೆ ನಂ.89/2, 89/1, 82/2, 83/5, 73/2, 92/1 ಹಾಗೂ 2 ಮನೆಗಳ ಸಂಬಂಧ ಹಾಕಿರುತ್ತೇನೆ. ನಮ್ಮ ತಂದೆಗೆ ನಾವು 6 ಜನ ಮಕ್ಕಳು. ಒಬ್ಬರು ತೀರಿಕೊಂಡಿರುತ್ತಾರೆ. ಸಾಕ್ಷಿಯು ಮುಂದುವರಿದು 5 ಜನ ಇರುತ್ತೇವೆಂದು ನುಡಿಯುತ್ತಾರೆ. ನನ್ನ ತಂದೆ ಹಾಗೂ ಅವರ ಅಣ್ಣ ತಮ್ಮಂದಿರ ಮದ್ಯೆ ಆದ ವಿಭಾಗದಲ್ಲಿ ನನ್ನ ತಂದೆಗೆ 82/2, 83/5 ಹಾಗೂ ಒಂದು ಮನೆ ಬಂದಿರುತ್ತದೆ. ನನ್ನ ತಂದೆಗೆ ದಾವಾ ಐಟಂ ನಂ.2, 3 ಮತ್ತು ದಾವಾ ಐಟಂ ನಂ.4 ಮತ್ತು 6 ಬಂದಿರುತ್ತದೆಂದರೆ ಸರಿ ಇವುಗಳು ನನ್ನ ತಂದೆಯ ವಿಭಾಗಕ್ಕೆ ಬಂದ ಸ್ವತ್ತುಗಳು ಎಂದರೆ ಸರಿ. ನಮ್ಮ ತಂದೆಯ ಜೀವಿತಾ ಕಾಲದಲ್ಲೇ ನಾವು ಮತ್ತು ನನ್ನ ಅಣ್ಣ ತಮ್ಮಂದಿರು ಸದರಿ ಸ್ವತ್ತುಗಳಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆಂದರೆ ಸುಳ್ಳು. ನಾನು ದಾವಾ ಐಟಂ ನಂ.3 ಮತ್ತು 6 ರಲ್ಲಿ ಸ್ವಾಧೀನದಲ್ಲಿದ್ದೇನೆಂದರೆ ಸುಳ್ಳು.ಅದು ಸೃಷ್ಟಿ ಮಾಡಿಕೊಂಡಿದ್ದಾರೆಂದು ನುಡಿಯುತ್ತಾರೆ.

2. ನನ್ನ ತಂದೆಯ ಜೀವಿತಾಕಾಲದಲ್ಲೇ ನಾವುಗಳು ವಿಭಾಗ ಮಾಡಿಕೊಂಡು ನಾನು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇವೆಂದರೆ ಸರಿಯಲ್ಲ. ನಾನು ನನ್ನ ಭಾಗ ತೆಗೆದಕೊಂಡು ಬೆಂಗಳೂರಿನಲ್ಲಿ ನನ್ನ ಸಂಸಾರದ ಸಮೇತ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೆ ಎಂದರೆ ಸಾಕ್ಷಿಯು ಆಸ್ತಿಯ ಸಂಬಂಧ ಜಗಳವಾಗಿ ಪ್ರತ್ಯೇಕವಾಗಿ ಇದ್ದೇವು ಎಂದು ನುಡಿಯುತ್ತಾರೆ. ಬೆಂಗಳೂರಿನಲ್ಲಿ ಸೈಟು ಮನೆ ಸಂಪಾದಿಸಿರುತ್ತೇನೆಂದರೆ ಸುಳ್ಳು. ಈ ದಾವೆ ಹಾಕುವ 30 ವರ್ಷಗಳ ಪೂರ್ವದಲ್ಲೇ ನಾನು ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇನೆಂದರೆ ಸುಳ್ಳು. ವಿಭಾಗವಾದ ನಂತರ ನನ್ನ ತಂದೆ ತಾಯಿ 3ನೇ ಪ್ರತಿವಾದಿಯ ಜೊತೆ ವಾಸವಿದ್ದರು ಎಂದರೆ ಸ್ವಲ್ಪ ಜಗಳವಾಗಿ ಅಲ್ಲಿ ಇದ್ದರು ಯಾರು ಬೇರೆಯಾಗಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ತಾಯಿಯ ಉತ್ತರಾಧಿ ಕ್ರಿಯೆಯನ್ನು 3ನೇ ಪ್ರತಿವಾದಿ ಮಾಡಿರುತ್ತ್ರೆಂದರೆ ನಾವು ಸೇರಿ ಮಾಡಿರುತ್ತೇವೆಂದು ನುಡಿಯುತ್ತ್ರಾರೆ.

3. ನಾವು ವಿಭಾಗವಾದ ನಂತರ ದಾವಾ ಸ್ವತ್ತು ಐಟಂ ನಂ.1 ನ್ನು 1ನೇ ಪ್ರತಿವಾದಿಯ ತಂದೆ ಹಾಗೂ 3ನೇ ಪ್ರತಿವಾದಿ ಸೇರಿ 1ನೇ ಪ್ರತಿವಾದಿಗೆ ಕ್ರಯ ಮಾಡಿಕೊಟ್ಟಿರುತ್ತಾರೆಂದರೆ ಸುಳ್ಳು. 3ನೇ ಪ್ರತಿವಾದಿಯು ತಾನು ಸಂಪಾದನೆ ಮಾಡಿರುವ ಹಣದಲ್ಲಿ ದಿಃ08.11.2000 ನೇ ಇಸವಿಯಲ್ಲಿ ಚಿಕ್ಕಸೋವಾಚಾರಿ ರವರಿಂದ ದಾವಾ ಸ್ವತ್ತು ಐಟಂ ನಂ.1 ನ್ನು 1ನೇ ಪ್ರತಿವಾದಿಯ ಹೆಸರಿಗೆ ಮಾಡಿಕೊಟಿರುತ್ತಾರೆಂದರೆ ಸಾಕ್ಷಿಯು ಅದು ಒಟ್ಟು ಕುಟುಂಬದ ಆದಾಯದಲ್ಲಿ ಮಾಡಿರುತ್ತಾರೆಂದು ನುಡಿಯುತ್ತಾರೆ. ಸದರಿ ಕ್ರಯಪತ್ರದಂತೆ ನನ್ನ ತಂದೆಯ ಹೆಸರಿನಲ್ಲಿ ಖಾತೆ ಪಹಣಿ ನೊಂದಣಿಯಾಗಿತ್ತು ಎಂದರೆ ಸುಳ್ಳು. ಸಾಕ್ಷಿಯು ಮುಂದುವರಿದು ನನ್ನ ತಂದೆಯ ಹೆಸರಿನಲ್ಲಿ ಖಾತೆ ಪಹಣಿ ಬಂದಿರುತ್ತದೆಂದು ನುಡಿಯುತ್ತಾರೆ.

4. ನನ್ನ ತಂದೆಯು ದಿಃ23.10.2008 ರಂದು 3ನೇ ಪ್ರತಿವಾದಿಗೆ ಸದರಿ ದಾವಾ ಐಟಂ ನಂ.1 ನ್ನು ದಾನಪತ್ರವನ್ನಾಗಿ ಮಾಡಿಕೊಟ್ಟಿದ್ದಾರೆಂದರೆ ಸರಿ. ದಾನಪತ್ರದಂತೆ 3ನೇ ಪ್ರತಿವಾದಿಯ ಹೆಸರಿಗೆ ಖಾತೆ ಪಹಣಿ ಆಗಿರುತ್ತದೆಂದರೆ ಸರಿ. ಅಂದಿನಿಂದಲೂ 3ನೇ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೆಂದರೆ ಸಾಕ್ಷಿಯು ನಾವು ಕೂಡ ಇದ್ದೇವು ಆದರೆ ಜಗಳವಾಗಿ ಇದ್ದಾರೆಂದು ನುಡಿಯುತ್ತಾರೆ.

5. ದಾವಾ ಸ್ವತ್ತು ಐಟಂ ನಂ.7 ಇದನ್ನು ದಿಃ12.08.2005 ರಲ್ಲಿ 3ನೇ ಪ್ರತಿವಾದಿಯು ಜಯಮ್ಮ ರವರ ಕಡೆಯಿಂದ ಕ್ರಯಕ್ಕೆ ಪಡೆದಿರುತ್ತಾರೆಂದರೆ ಸರಿ. ಅದರಂತೆ ಅವರ ಹೆಸರಿನಲ್ಲಿ ಖಾತೆ ಪಹಣಿ ಆಗಿರುತ್ತದೆಂದರೆ ಸರಿ. ದಾವಾ ಸ್ವತ್ತು ಐಟಂ ನಂ.1 ಮತ್ತು 7, 3ನೇ ಪ್ರತಿವಾದಿಯ ಸ್ವಾಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಒಟ್ಟು ಕುಟುಂಬದ ಆಸ್ತಿ ಎಂದು ನುಡಿಯುತ್ತಾರೆ. ಉಳಿದಂತೆ ದಾವಾ ಐಟಂ.2 ಮತ್ತು 6 ರಲ್ಲಿ ನಾನು ಹಾಗೂ ನನ್ನ ಅಣ್ಣ ತಮ್ಮಂದಿರು ಸ್ವಾಧೀನದಲ್ಲಿದ್ದೇವೆಂದರೆ ಸುಳ್ಳು. ಪ್ರಸ್ತುತ ದಾವೆ ಹಾಕಿದ ನಂತರ ರಾಮನಗರದಲ್ಲಿ ನಾನು ಮತ್ತೊಂದು ದಾವೆ ಹಾಕಿರುತ್ತೇನೆಂದರೆ ಸರಿ .ಅದು 445/12 ರಂತೆ ಹಾಕಿರುತ್ತೇನೆ. ಸದರಿ ದಾವೆಯು ರಾಮನಗರದಿಂದ ಕನಕಪುರದ ಮಾನ್ಯ

ಹಿರಿಯ ಶ್ರೇಣಿ ನ್ಯಾಯಾಲಯಕ್ಕೆ ವರ್ಗಾವಣೆ ಗೊಂಡಿದ್ದು ಅದರಂತೆ ದಾವಾ ಸಂಖ್ಯೆ 360/14 ಎಂದು ಆಗಿರುತ್ತದೆಂದರೆ ಸರಿ. ಸದರಿ ದಾವೆಯನ್ನು 2 ಸ್ವತ್ತುಗಳಿಗೆ ಅಂದರೆ ಸರ್ವೆ ನಂ.89/2 ರಲ್ಲಿ 3 ಎಕರೆ 7 ಗುಂಟೆ ಹಾಗೂ ಸರ್ವೆ ನಂ.89/1 ರಲ್ಲಿ 20 ಗುಂಟೆಗೆ ಹಾಕಿರುತ್ತೇನೆಂದರೆ ಸರಿ. ಸದರಿ ದಾವೆಯನ್ನು ನನ್ನ ತಂದೆ ಹಾಗೂ 3ನೇ ಪ್ರತಿವಾದಿಯ ವಿರುದ್ಧ ಹಾಕಿರುತ್ತೇನೆಂದರೆ ಸರಿ. ಸದರಿ ದಾವೆ ವಿಚಾರಣಾ ಹಂತದಲ್ಲಿದ್ದಾಗ ಪ್ರಸ್ತುತ ದಾವೆಯ ಬಗ್ಗೆ ಹೇಳಿದ ಕಾರಣ ಅದನ್ನು ವಾಪಸ್ಸು ಪಡೆದಿರುತ್ತೇನೆಂದರೆ ಸಾಕ್ಷಿಯು ಅವರೇ ವಾಪಸ್ ಪಡೆಯಲು ಹೇಳಿದ್ದಾರೆಂದು ನುಡಿಯುತ್ತಾರೆ.

6. 3ನೇ ಪ್ರತಿವಾದಿ 1 ಮತ್ತು 7 ನೇ ದಾವಾ ಆಸ್ತಿಯನ್ನು ಸ್ವಯಾರ್ಜಿತವಾಗಿ ಖರೀದಿ ಮಾಡಿದ್ದು ಅದರಲ್ಲಿ ನನಗೆ ಯಾವುದೇ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ. ನಾವು ಜಂಟಿ ಸ್ವಾಧೀನದಲ್ಲಿರುವುದಾಗಿ ತೋರಿಸಲು ದಾಖಲಾತಿ ನೀಡಿರುತ್ತೇವಾ ಎಂದರೆ ಸಾಕ್ಷಿಯು ಈ ಬಗ್ಗೆ ಜಗಳವಾಗಿರುವ ಬಗ್ಗೆ ಪೋಲೀಸನವರು ನೀಡಿರುವ ದಾಖಲೆಯನ್ನು ಹಾಜರು ಪಡಿಸಿರುತ್ತೇನೆಂದು ನುಡಿಯುತ್ತಾರೆ. ಅವರ ಭಾಗಕ್ಕೆ ಬಂದ ಸ್ವತ್ತಿನಲ್ಲಿ ಸದರಿಯವರು ಸ್ವಾಧೀನದಲ್ಲಿದ್ದು ಜೀವನ ನಡೆಸುತ್ತಿದ್ದಾರೆಂದರೆ ಸುಳ್ಳು. 2ನೇ ಪ್ರತಿವಾದಿಯು ಸಹ ಅವರಿಗೆ ಬಂದಂತಹ ಭಾಗದಲ್ಲಿ ಸ್ವಾದೀನದಲ್ಲಿರುತ್ತಾರೆಂದರೆ ಸಾಕ್ಷಿಯು ಅವರು ದಡ್ಡನಾಗಿರುತ್ತಾನೆಂದು ನುಡಿದು ನಂತರದಲ್ಲಿ ಭಾಗ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯ ಜೀವಿತಾ ಕಾಲದಲ್ಲೇ ಸ್ವತ್ತುಗಳ ವಿಭಾಗವನ್ನು ಮಾಡಿಕೊಟ್ಟಿದ್ದರು ಸಹಿತ ಇದರ ಬಗ್ಗೆ ನನಗೆ ಗೊತ್ತಿದ್ದರೂ ಸಹಿತ ಸುಳ್ಳು ಸಾಕ್ಷೆ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ನಾವುಗಳು ಪ್ರತ್ಯೇಕವಾಗಿ ಪಡಿತರ ಚೀಟಿಗಳನ್ನು ಪಡೆದುಕೊಂಡು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇವೆಂದರೆ ಸರಿಯಲ್ಲ. ನಾವು ಒಟ್ಟು ಕುಟುಂಬದಲ್ಲಿರುವ ಬಗ್ಗೆ ನಾನು ದಾಖಲಾತಿಯನ್ನು ಹಾಜರು ಪಡಿಸಿರುತ್ತೇನೆ. ಅದನ್ನು ನ್ಯಾಯಾಲಯದಲ್ಲಿ ನಿಶಾನೆಯನ್ನಾಗಿ ಮಾಡಿಸಿರುತ್ತೇನೆ. ನಾನು ಯಾವುದೇ ದಾಖಲಾತಿಯನ್ನು ಹಾಜರು ಪಡಿಸದೇ ಇದ್ದರೂ ಈ ಬಗ್ಗೆ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಬಂದಂತಹ ಭಾಗದಲ್ಲಿ ನಾನು ಮನೆ ಕಟ್ಟಿಕೊಂಡು 2 ಹಸುಗಳನ್ನು ಸಹ ಇಟ್ಟಿದ್ದೇನೆಂದರೆ ಹೌದು. ಸಾಕ್ಷಿಯು ಮುಂದುವರಿದು ಸದರಿ ಜಾಗ ನಮ್ಮದ್ದಲ್ಲ ಇನ್ನು ನೊಂದಣಿ ಮಾಡಿಸಿಲ್ಲ ಎಂದು ನುಡಿಯುತ್ತಾರೆ. ದಾವಾ

ಐಟಂ ನಂ.1 ಮತ್ತು 7 ನ್ನು 3ನೇ ಪ್ರತಿವಾದಿಯು ಖರೀದಿ ಮಾಡಿದ್ದು ಅವರೇ ಕಂದಾಯ ಕೂಡ ಕಟ್ಟುತ್ತಿದ್ದಾರೆಂದರೆ ಸಾಕ್ಷಿಯು ಅವರೇ ಈಗ ಕಂದಾಯ ಕಟ್ಟುತ್ತಿದ್ದಾರೆಂದು ನುಡಿಯುತ್ತಾರೆ. ಸದರಿ ಐಟಂ ನಂ.1 ಮತ್ತು 7, 3ನೇ ಪ್ರತಿವಾದಿಯ ಸ್ವಾಯಾರ್ಜಿತ ಸ್ವತ್ತು ಆಗಿದ್ದರೂ ಸಹಿತ ಅದನ್ನು ಪಡೆಯಲು ಈ ರೀತಿ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಬೆಂಗಳೂರಿನಲ್ಲಿ ಬಿಟಿಎಸ್ ನಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದೆ ಎಂದರೆ ಸುಳ್ಳು. 3ನೇ ಪ್ರತಿವಾದಿ ದನ ಕುರಿಗಳು ಹಾಗೂ ರೇಷ್ಮೆ ಬೆಳೆ ಇವುಗಳಿಂದ ಬಂದ ಆದಾಯದಲ್ಲಿ ಖರೀದಿ ಮಾಡಿದ್ದು ನನಗೆ ಗೊತ್ತಿದ್ದರೂ ಸಹಿತ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ .**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**